ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ದೂರವಾಣಿ ಇಲಾಖೆಯವರು ಸರ್ಕಾರಕ್ಕೆ ಹಣ ಪಾವತಿ ಮಾಡುತ್ತಿರುತ್ತಾರೆ.

ಆಪ್ಟಿಕಲ್ ಫೈಬರ್ ಕೇಬಲ್ ಹಾಕುವ ಖಾಸಗಿ ಸಂಸ್ಥೆಯವರು ಸರ್ಕಾರದ ನಿರ್ದೇಶನದಂತೆ ಬ್ಯಾಂಕ್ ಗ್ಯಾರಂಟಿಯನ್ನು ನೀಡುತ್ತಿರುತ್ತಾರೆ.

ಆ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈ ಕಾಮಗಾರಿಗಾಗಿ ಮಂಡ್ಯ ಜಿಲ್ಲೆಯಲ್ಲಿ ರೂ. 2,66,420.00 ಗಳ ಹಣವು ಸಂಗ್ರಹವಾಗಿರುತ್ತದೆ.

ಇ) ಹೀಗೆ ಕ್ರೋಢೀಕೃತವಾಗಿರುವ ಹಣವನ್ನು ಯಾವುದೇ ರಸ್ತೆಗಳ ದುರಸ್ತಿಗೆ ವೆಚ್ಚ ಮಾಡಿರುವುದಿಲ್ಲ.

ಈ) ಹೀಗೆ ಪಾವತಿಯಾದ ಹಣವನ್ನು ನೇರವಾಗಿ ಸರ್ಕಾರಕ್ಕೆ ಸ್ವೀಕೃತಿ ಲೆಕ್ಕಕ್ಕೆ ಜಮಾ ಮಾಡಿ ಇಲಾಖೆಯ "3054 ರಸ್ತೆ ಮತ್ತು ಸೇತುವೆಗಳು ಯೋಜನೇತರ" ಶೀರ್ಷಿಕೆಯ ಅನುದಾನದಲ್ಲಿ ಕೇಬಲ್‌ಗಾಗಿ ಅಗೆದ ರಸ್ತೆಗಳನ್ನು ದುರಸ್ತಿಗೊಳಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿನ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ

2201 (2678) ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶಗಳಲ್ಲಿನ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದರೆ, ಎಷ್ಟು ಸಾವಿರ ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೇರಿಸಲು ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಈ ರಸ್ತೆಗಳನ್ನು ಗುರುತಿಸಲು ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನೇನಾದರೂ ರಚಿಸಲಾಗಿದೆಯೇ;

ಈ) ಈ ಸಮಿತಿಯ ರೂಪು ರೇಷೆಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಆ) ಪ್ರಸ್ತಾವನೆ ಸ್ವೀಕೃತವಾಗಿದ್ದು, ಇನ್ನೂ ಪರಿಶೀಲನೆಯ ಹಂತದಲ್ಲಿದೆ.

ಇ) ಪ್ರಸ್ತಾವನೆಯನ್ನು ತಯಾರಿಸಲು ಸರ್ಕಾರವು ಜಿಲ್ಲಾ ಪಂಚಾಯತ್ ಹಾಗೂ ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಇಂಜಿನಿಯರ್‌ಗಳನ್ನೊಳಗೊಂಡ "ಜಂಟಿ ಸಮಿತಿ" ಗಳನ್ನು ಸರ್ಕಾರದ ದಿನಾಂಕ 19/8/2002ರ ಆದೇಶದ ಮೂಲಕ ಸೃಜಿಸಿ ಪ್ರಸ್ತಾವನೆಗಳನ್ನು ತಯಾರಿಸುವ ಬಗ್ಗೆ ಮಾರ್ಗಸೂಚಿಯನ್ನು ನೀಡಿರುತ್ತದೆ.

ಈ) 1. ಪ್ರಸ್ತಾವಿತ ರಸ್ತೆಗಳು ಎರಡೂ ಕಡೆ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಅಥವಾ ಜಿಲ್ಲಾ ಮುಖ್ಯ ರಸ್ತೆ ಸಂಪರ್ಕ ಕಲ್ಪಿಸಬೇಕು.

2. ಡಾಂಬರು ಮೇಲ್ಮೈ ಹೊಂದಿರಬೇಕು.

3. ಸಾಧ್ಯವಾದ ಮಟ್ಟಿಗೆ 25 ಮೀಟರ್ ಅಗಲ ಇರಬೇಕು.

ನಬಾರ್ಡ್ ಯೋಜನೆಯಲ್ಲಿ ಕೈಗೊಂಡ ಮೇಲಿನ ಷರತ್ತುಗಳಿಗೆ ಒಳಪಡುವ ರಸ್ತೆಗಳಿಗೆ ಆದ್ಯತೆ ನೀಡುವುದು.